ಶ್ರೀ ಎಸ್. ಕರಿಯಪ್ಪನವರು.—ಮರಳವಾಡಿ ಕೆರೆ ಅಚ್ಚುಕಟ್ಟಿನಲ್ಲಿ ಬಾಕಿಯಿರುವ ಒಟ್ಟು ಪೊಬಲಗೆಷ್ಟು ?

*ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—

ರೂ. 18,942-14-9.

ಶ್ರೀ ಎಸ್. ಕರಿಯಪ್ಪನವರು. —ಇಷ್ಟೊಂದು ಪೊಬಲಗು 15 ವರ್ಷಗಳಿಂದ ಒಂದೇ ಸಮನಾಗಿ ನಿಂತಿದೆ. ಇಲ್ಲಿಯವರೆಗೆ ಅದನ್ನು ತಗ್ಗಿಸುವುದಕ್ಕೆ ಏನಾದರೂ ಪ್ರಯತ್ನ ನಡೆದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಇದು ನಾನಾ ಕಾರಣಗಳಿಂದ ನಿಂತುಬಂದಿದೆ. ಇದಕ್ಕೆ ಸಂಬಂಧಪಟ್ಟ ಎರಡು ವರ್ಷದ ಹಿಂದಿನ ರಿಕಾರ್ಡು ಎಲ್ಲೋ ಬಿದ್ದಿತ್ತು. 1949ನೆಯ ಇಸವಿ ಡಿಸೆಂಬರಿನಲ್ಲಿ ಮತ್ತು 1950ನೆಯ ಇಸವಿ ಏಪ್ರಿಲ್‌ನಲ್ಲಿ ಅದನ್ನು ತನಿಖೆಮಾಡಿ ಕಳುಹಿಸಿಕೊಟ್ಟಿದೆ. ಇನ್ನು ಕೆಲವು ದಿವಸಗಳಲ್ಲಿ ಆರ್ಡರಾಗಬಹುದು.

ಶ್ರೀ ಎಸ್. ಕರಿಯಪ್ಪನವರು.—ಏನು ಆರ್ಡರಾಗಬಹುದು ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ರಿಮಿಶನ್ ಕೊಡಬಹುದು ಎಂದು ಅಭಿಪ್ರಾಯಪಟ್ಟಿದೆ.

ಶ್ರೀ ಎಸ್. ಕರಿಯಪ್ಪನವರು.—ಇಷ್ಟು ಡಿಮ್ಯಾಂಡೂ ಕೂಡ ರಿಮಿಶನ್ ಆಗಬಹುದೆ ?

The Hon'ble Sri H. SIDDAIYA.—Very likely.

Reduction of grant for Temperance Federation in Kolar Gold Field.

*Q.—84. **Sri M. MUNISWAMY** (Kolar District—Depressed Class).—

Will the Government be pleased to state :—

the reasons for the reduction of grant from Rs. 3,500 to Rs. 2,000 which was hitherto provided to the Temperance Federation, Kolar Gold Field ?

A.—**The Hon'ble Sri H. SIDDAIYA** (Minister for Revenue and Excise).—

It was reduced mainly for reasons of economy,

Sri H. C. LINGA REDDY (Kolar District—General).—What is the work which the Temperance Federation is doing in the State ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಪ್ರಚಾರ ಮಾಡುತ್ತಿದ್ದಾರೆ. ಕುಡಿಯಬಾರದು, ಕುಡಿಯುವುದರಿಂದ ಹಾನಿಯೊಗುತ್ತದೆ ಎಂದು ಪ್ರಚಾರಮಾಡುವುದರಿಂದ ಸ್ವಲ್ಪ ಕಡಮೆಯೊಗಬಹುದು.

Sri H. C. LINGA REDDY.—Is it not necessary that the grant to this Federation should be enhanced after the introduction of Prohibition in the State ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಎಕಾನೆಮಿ ದೃಷ್ಟಿಯಿಂದ ಇದನ್ನು ಸ್ವಲ್ಪಕಡಮೆಮಾಡಲಾಗಿದೆ.

Sri M. MUNISWAMY.—If so, is it not better that toddy tapping should be reintroduced in the Kolar Gold Field ?

The Hon'ble Sri H. SIDDAIYA.—That does not arise.

Construction of Jampadahalla Project in Tarikere Taluk.

*Q.—46. **Sri H. M. MALLIKARJUNAPPA** (Chikmagalur District—General).—

Will the Government be pleased to state :—

(*a*) when the estimate to construct the Jampadahalla Project in Tarikere Taluk was prepared ;

(*b*) the amount of the estimate :

(*c*) the number of acres of land that will be irrigated if the project is constructed ;

(*d*) whether any representations were made from the people of Tarikere to take up the Jampadahalla Project ?

A.—**The Hon'ble Sri T. MARIAPPA** (Home Minister).—

(*a*) 1946-47.

(*b*) 24·67 lakhs.

(*c*) 3,800 acres.

(*d*) Yes.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—(b) ಪ್ರಶ್ನೆಗೆ ಉತ್ತರವಾಗಿ 24·67 ಲಕ್ಷ ರೂಪಾಯಿಗಳು ಎಂದು ಹೇಳಿದೆ. ಈ ಅಂದಾಜು ತಯಾರಾಗಿರುವುದು ಯಾವಾಗ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು;—ಅಂದಾಜು ತಯಾರಾಗಿರುವುದು 1946—47 ರಲ್ಲಿ. ಈಚೆಗೆ 1948—49ರಲ್ಲಿ ಅದು ರಿವೈಜ್ ಆಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—1946-47ರಲ್ಲಿ 24 ಲಕ್ಷ ರೂಪಾಯಿಗಳಿಗೆ ಅಂದಾಜು ತಯಾರಾಗಿತ್ತು, ಅಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲ, 15·80 ಲಕ್ಷ ರೂಪಾಯಿಗಳಿಗೆ ತಯಾರಾಗಿತ್ತು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಾಗಾದರೆ ಈಗ ರಿವೈಜ್ ಆಗಿರುವುದರ ಪ್ರಕಾರ 10 ಲಕ್ಷ ಹೆಚ್ಚಿದೆಯಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—15·80 ಲಕ್ಷ. ಇದ್ದುದು 24·67 ಲಕ್ಷಕ್ಕೆ ರಿವೈಜ್ ಆಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈ ಎರಡು ವರ್ಷಗಳಲ್ಲಿ ಇಷ್ಟು ವ್ಯತ್ಯಾಸವಾಗುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1946-47 ರಲ್ಲಿ ಇದ್ದ ಹಳೇ ದರದ ಪ್ರಕಾರ ಆಗ ಅಂದಾಜುಮಾಡಿತು. ಈಚೆಗೆ ಬೆಲೆಗಳು ಏರಿದ್ದರಿಂದ ಅದರ ಪ್ರಕಾರ ಅಂದಾಜು ಹೆಚ್ಚಾಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಕಾರ ಈಗಲೇ ಈ ಕೆಲಸವನ್ನು ತೆಗೆದುಕೊಳ್ಳುವುದು ಅನುಕೂಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದಕ್ಕೆ ಒಂದು ಟೆಕ್ನಿಕಲ್ ಸಮಿತಿಯಿದೆ. ಅದಕ್ಕೆ ಈ ವಿಚಾರವನ್ನು ರೆಫರ್‌ಮಾಡಿದ್ದೆವು. 3,800 ಎಕರೆಗಳ ಪೈಕಿ 2,600 ಎಕರೆಗಳು ಮಾತ್ರ ಹೊಸದಾಗಿ ಈ ಪ್ರಾಜೆಕ್ಟಿನಿಂದ ತರಿಯಾಗುತ್ತವೆ. ಇದರಿಂದ ಖರ್ಚು ಹೆಚ್ಚೇ ಹೊರತು ಲಾಭದಾಯಕವಲ್ಲ. ಅದೂ ಅಲ್ಲದೆ ಬೇಗ ಇದನ್ನು ಮುಗಿಸುವುದೂ ಕಷ್ಟ ಎಂದು ಆ ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಇನ್ನೂ ಆಖೈರು ತೀರ್ಮಾನಮಾಡಿಲ್ಲ. ಐದು ವರ್ಷದ ಯೋಜನೆಯಲ್ಲಿ ಇದನ್ನು ಸೇರಿಸಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈ ಪ್ರಾಜೆಕ್ಟನ್ನು ನಮ್ಮ ಸರ್ಕಾರದವರು ತೆಗೆದುಕೊಳ್ಳಬೇಕೆ ಅಥವಾ ಇಂಡಿಯಾ ಸರ್ಕಾರದವರು ತೆಗೆದುಕೊಳ್ಳಬೇಕೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂಡಿಯಾ ಸರ್ಕಾರದವರು ತೆಗೆದುಕೊಳ್ಳಬೇಕೆಂಬ ಅಭಿಪ್ರಾಯ ವಿಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹೆಚ್ಚು ಆಹಾರ ಬೆಳೆಯುವ ಯೋಜನೆಯ ಪ್ರಕಾರ ಇದನ್ನು 5 ವರ್ಷದ ಯೋಜನೆಯಲ್ಲಿ ಸೇರಿಸಿ ತೆಗೆದುಕೊಳ್ಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೆಚ್ಚು ಆಹಾರ ಬೆಳೆಯುವ ಯೋಜನೆಗೆ ಇದರಿಂದ ಹೆಚ್ಚು ಸಹಾಯವಾಗುವುದಿಲ್ಲ. ಇದನ್ನು ರಾಂಗ್ ಟರ್ಮ್ ಪ್ರಾಜೆಕ್ಟುಗಳ ಜೊತಗೆ ಬೇಕಾದರೆ ಸೇರಿಸಬಹುದು ಎಂಬ ಅಭಿಪ್ರಾಯವಿತ್ತು. ಷಾರ್ಟ್ ಟರ್ಮ್ ಪ್ರಾಜೆಕ್ಟಿನೊಂದಿಗೆ ಇದನ್ನು ತೆಗೆದುಕೊಳ್ಳಬೇಕೆಂದು ಪ್ಲಾನಿಂಗ್ ಕಮಿಷನ್‌ನವರನ್ನು ಕೇಳಿದ ಮೇರೆ ಆ ಕಮಿಷನ್‌ನವರು ಕಳುಹಿಸಿರುವ ಪ್ಲಾನ್‌ನಲ್ಲಿ ಇದನ್ನು ಸೇರಿಸಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಇದನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಯೋಚನೆಮಾಡಿದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ತಕ್ಷಣ ಇದನ್ನು ಷಾರ್ಟ್ ಟರ್ಮ್ ಪ್ರಾಜೆಕ್ಟಿನಲ್ಲಿ ತೆಗೆದುಕೊಳ್ಳುವುದಿಲ್ಲ. 24·67 ಲಕ್ಷ ರೂಪಾಯಿಗಳ ಕೆಲಸವನ್ನು 1952ನೆಯ ಇಸವಿಯಲ್ಲಿ ಪೂರ್ತಿಸುವುದಕ್ಕಾಗುವುದಿಲ್ಲ. ಜೊತೆಗೆ ಟೆಕ್ನಿಕಲ್ ಸಮಿತಿ ಆಖೈರು ತೀರ್ಮಾನ ಕೊಟ್ಟಿಲ್ಲ. ಇದು ಬಹಳ ದುಬಾರಿ ವೆಚ್ಚ ತಗಲುವುದಾಗಿಯೂ ಮತ್ತು ರಾಭದಾಯಕವಿಲ್ಲದೆಯೂ ಇದೆ. ಈಗಾಗಲೇ 1,200 ಎಕರೆ ಅಚ್ಚುಕಟ್ಟು ನೀರಿನ ವಸತಿಯನ್ನು ಪಡೆಯುತ್ತಿದೆ. ಹೊಸದಾಗಿ ನೀರಾವರಿಯಾಗುವ ವಿಸ್ತೀರ್ಣ ಕಡಮೆ. ಆದ್ದರಿಂದ ಇದನ್ನು ಸದ್ಯಕ್ಕೆ ಮುಂದೆಹಾಕಲಾಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—2,600 ಎಕರೆಗೆ ಪೂರ್ತಿಯಾಗಿ ದರಖಾನ್ತು ಕೊಟ್ಟಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈಗ ತೆಗೆದುಕೊಂಡಿರುವ ಜಮೀನುಗಳನ್ನು ವಜಾಮಾಡಿದರೆ ನಾಲ್ಕು ಲಕ್ಷ ರೂಪಾಯಿಗಳ ವರಮಾನ ಬರುತ್ತದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿಲ್ಲ. ಈಗ ಕೊಟ್ಟಿರುವುದರಲ್ಲಿ ಕೆಲವು ಸರ್ಕಾರಿ ಮತ್ತು ಫಾರೆಸ್ಟ್ ಇರಾಖೆಯಲ್ಲಿದ್ದುವು ಎಂದು ವರದಿಯಾಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈ ಪ್ರಾಜೆಕ್ಟನ್ನು ಪೂರೈಸಿದರೆ ಎಲ್ಲಾ ಜಮೀನೂ ಸಾಗಾಗುತ್ತದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—2,600 ಎಕರೆಗಳು ಪೂರ್ತಿಯಾಗಿ ತರಿಯಾಗುತ್ತವೆ.

ಶ್ರೀ ಎಚ್.ಎಂ. ಮಲ್ಲಿಕಾರ್ಜುನಪ್ಪನವರು.—ಇದರಿಂದ ಹಿಡುವಳಿಯಲ್ಲಿರುವ 1,200 ಎಕರೆಗೂ ನೀರು ಬರುತ್ತದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1,200 ಎಕರೆಗಳಲ್ಲಿ ತರಿ ಮತ್ತು ಬಾಗಾಯ್ತು ಎರಡೂ ಇವೆ. ಈಗಾಗಲೇ ಅವಕ್ಕೆ ನೀರಿನ ಅನುಕೂಲವಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಸದ್ಯಕ್ಕೆ ಇದನ್ನು ತೆಗೆದುಕೊಳ್ಳುವ ಯೋಜನೆಯಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದನ್ನು ಟೆಕ್ನಿಕಲ್ ಸಮಿತಿಯ ಮುಂದಿಟ್ಟಾಗ ಅವರು ಯೋಚನೆಮಾಡಿ ಇದು ಬಹಳ ದುಬಾರಿ ಖರ್ಚಿನದು, ಆದ್ದರಿಂದ ಇದನ್ನು ಪುನರ್ವಿಮರ್ಶೆಮಾಡುವುದು ಅಗತ್ಯ ಎಂದು ಹೇಳಿದ್ದಾರೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಇಂಥ ಪ್ರಾಜೆಕ್ಟುಗಳು ಈಗ ಮೈಸೂರು ಸಂಸ್ಥಾನದಲ್ಲಿ ಎಷ್ಟಿವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇಕಾದಷ್ಟಿವೆ. ಐದು ವರ್ಷ ಮತ್ತು 15 ವರ್ಷದ ಯೋಜನೆಗಳಲ್ಲಿ ಸೇರಿಸಿರುವುದು ಐದಾರಿವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಇದಕ್ಕಿಂತ ಹೆಚ್ಚು ಅಂಥ ಯೋಜನೆಗಳಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟು ಬೆರೆಯಾಗತಕ್ಕವು ಇಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈ ಪ್ರದೇಶದಲ್ಲಿ ಒಂದು ಎಕರೆಗೆ 600 ರೂಪಾಯಿವರೆಗೆ ಬೆರೆಯಾಗುತ್ತದೆಯಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—2,600 ಎಕರೆಗೆ 24·67 ಲಕ್ಷದಂತೆ ಎಷ್ಟಾಗುತ್ತದೆಯೆಂದು ಲೆಕ್ಕ ಹಾಕಬೇಕು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಿಡುವಳಿಯಲ್ಲಿರುವ 1,200 ಎಕರೆಗೆ ಸರಿಯಾಗಿ ನೀರು ನರಬರಾಯಿ ಆಗುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ. ಅದಕ್ಕೆ ವಿಶೇಷ ರೀತಿಯಲ್ಲಿ ಏರ್ಪಾಡುಮಾಡಬಹುದು. ಆದರೆ ಅದರಿಂದ ಸರ್ಕಾರಕ್ಕೆ ಪ್ರತಿಫಲ ಬರುವುದಿಲ್ಲ. ಈಗಾಗಲೇ ಆ ಜಮೀನುಗಳು ನೀರಾವರಿಗೆ ಸೇರಿವೆ. ಹೊಸದಾಗಿ 2,200 ಎಕರೆ ಮಾತ್ರ ತರಿಯಾಗುತ್ತದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—1,200 ಎಕರೆಯವರು ಕಾಂಟ್ರಿಬ್ಯೂಷನ್ ಕೊಡುವುದಿಲ್ಲವೆಂದು ಹೇಳುತ್ತಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಇನ್ನೂ ವಿಚಾರಮಾಡಬೇಕು.

ಶ್ರೀ ಎಚ್ ಎಂ. ಮಲ್ಲಿಕಾರ್ಜುನಪ್ಪನವರು.—ಅವರೂ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಹೇಳಿದರೆ ಅವರಿಗೆ ನೀರು ಸಿಕ್ಕುವ ಭರವಸೆಯಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಪ್ಲಾನಿಂಗ್ ಸಮಿತಿಯಲ್ಲಿ ಇತ್ಯರ್ಥವಾಗಬೇಕು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಅದಷ್ಟು ಜಾಗ್ರತೆ ಅದನ್ನು ಏಮರ್ಜೆಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡುತ್ತೇವೆ.

Mr. SPEAKER.—Next question. Sri K. Sampangi Ramiah. The Hon'ble Member is not present. Question No. 88 will he treated as an unstarred question.

Next question. Sri K. Puttaswamy.

Supply of Fruit plants by the Gardens Department.

*Q.—97. Sri K. PUTTASWAMY (Mandya District—General).—

Will the Government be pleased to state :—

(*a*) whether fruit plants are supplied by the Gardens Department ;

(*b*) how many are supplied to people;

(*c*) in what other way the Gardens Department is of use to the agriculturist?

A.—The Hon'ble Sri T. MARIAPPA (Home Minister).—

(*a*) Yes.

(*b*) 1948-49. ... 151,324 plants.
1949-50 ... 126,424 ,,
1950-51 ... 325,402 ,,

(*c*) The Gardens Department is helpful to the agriculturists in helping them to cultivate horticultural crops, to acquaint them with the methods of scientific cultivation and in securing them pedigree plants and seeds at reasonable rates and to educate them regarding plant pest and in giving general advice regarding horticultural problems.

ಶ್ರೀ ಕೆ. ಪುಟ್ಟಸ್ವಾಮಿಯವರು.—1,23,424 ಸಸಿಗಳನ್ನು ರೈತರಿಗೆ ಕೊಟ್ಟಿದೆ ಎಂದು ಹೇಳಿದ್ದೀರಿ. ಅದರಲ್ಲಿ ಎಷ್ಟು ಸಸಿಗಳನ್ನು ನೆಟ್ಟಿದ್ದಾರೆ ಎಂಬ ಅಂಕಿ ಅಂಶ ಇದೆಯೇ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಎಲ್ಲಾ ನೆಟ್ಟಿದ್ದಾರೆ ಎಂದು ಭಾವಿಸಿದ್ದೇವೆ. ಕೊಡುವುದು ಮಾತ್ರ ನಮ್ಮ ಕೆಲಸ. ಯಾರ್ಯಾರು ಗಿಡ ಹಾಕುತ್ತೇವೆ ಎಂದು ಹೇಳುತ್ತಾರೋ ಅವರಿಗೆಲ್ಲಾ ಗಿಡ ಹಾಕುವುದಕ್ಕೆ ಹುಮ್ಮಸ್ಸು ಇರುತ್ತದೆ. ವನಮಹೋತ್ಸವದ ಕಾರ್ಯಕ್ರಮದಂತೆ ಬಹಳ ಭಾಗ ನೆಟ್ಟಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಅವುಗಳನ್ನೆಲ್ಲಾ ಮುಫತ್ತಾಗಿ ಕೊಟ್ಟಿದ್ದೀರೋ ಅಥವಾ ದುಡ್ಡಿಗೆ ಕೊಟ್ಟಿದ್ದೀರೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಕಾಸ್ಟ್ ಪ್ರೈಸ್‌ಗೆ ಕೊಟ್ಟಿದ್ದೇವೆ. ಕೆಲವು ಮುಫತ್ತಾಗಿ ಕೊಟ್ಟಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಆ ರೀತಿ ಕಾಸ್ಟ್ ಪ್ರೈಸ್‌ಗೆ ಕೊಟ್ಟಿರೋದರಲ್ಲಿ ಎಷ್ಟು ಹಣ ಬಂದಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ತೋಟದ ಇಲಾಖೆಯವರು ನರಸಿಗಳನ್ನು ಸರಬರಾಯಿ ಮಾಡಿರುವುದರಲ್ಲಿ ತಾಯಿಬೇರು ಕಡಿದುಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ತಾಯಿಬೇರು ಕಡಿದಿರುವುದರಿಂದ ದೊಡ್ಡದಾಗಿ ಬೆಳೆದಿರುವ ಗಿಡಗಳೆಲ್ಲ ಒಣಗಿಹೋಗುತ್ತಿವೆ ಎಂಬ ಅಂಶವನ್ನು ಯಾರಾದರೂ ಸರ್ಕಾರದವರ ಗಮನಕ್ಕೆ ತಂದಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗೆ ತಂದಿದ್ದ ಕಾಲದಲ್ಲಿ ಪರೀಕ್ಷೆ ಮಾಡಿ ಮುಂದಿನ ವರ್ಷ ತಾಯಿಬೇರು ತೆಗೆಯದಹಾಗೆ ತಿಳಿವಳಿಕೆ ಕೊಡುತ್ತೇವೆ ಎಂಬುದಾಗಿ ಭರವಸೆ ಕೊಟ್ಟಿದ್ದರೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾಯಿಬೇರು ಕಡಿಯಕೂಡದು, ಗಿಡ ಒಣಗಿಹೋಗುತ್ತದೆ ಎಂಬುದಾಗಿ ಖಚಿತವಾಗಿ ತಿಳಿಸಲಾಗಿದೆ. ನರಸಿ ಕೊಡುವಾಗ ಹುಷಾರಾಗಿ ತೆಗೆದುಕೊಟ್ಟಿದ್ದಾರೆ, ಬಹು ಭಾಗದಲ್ಲಿ ಗಿಡಗಳು ಚೆನ್ನಾಗಿ ಬಂದಿವೆ ಎಂಬುದಾಗಿ ವರದಿ ಬಂದಿದೆ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಈಗ ಮೂರು ವರ್ಷದಿಂದ ಸರ್ಕಾರದವರಿಗೆ ಹಣ ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳುತ್ತೀರಾ ?

ಮಾನ್ಯ ಟಿ. ಮರಿಯಪ್ಪನವರು.—ಇದರಲ್ಲಿ ಹಣ ಖರ್ಚಾಗುವುದು ಮುಖ್ಯ ದೃಷ್ಟಿಯಲ್ಲ. ಗಿಡಗಳನ್ನು ಬೆಳೆಸುವುದಕ್ಕೆ ಸಾರ್ವಜನಿಕರಿಗೆ ನರಸಿ ಒದಗಿಸಬೇಕು.

ಶ್ರೀ ಬಿ. ಚನ್ನಬೈರೇಗೌಡರು.—ಮೂರು ವರ್ಷಕ್ಕೆ ಹಣ ಎಷ್ಟು ವೆಚ್ಚವಾಗಿದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೆರೆ ಹೇಳಬರ್ಲೆ. 1948-49ರಲ್ಲಿ 7,804 ಗ್ರಾಫ್ಟೆಡ್ ಪ್ಲಾಂಟ್ಸ್ ಕೊಟ್ಟಿದೆ ಇತರ ನಸಿಗಳು 33,929 ಬೆರೆ. 41, 33 ರೂಪಾಯಿ. 1949-50ರಲ್ಲಿ 39,576 ರೂಪಾಯಿ. 1950-51ರಲ್ಲಿ 85,678 ರೂಪಾಯಿ.

ಶ್ರೀ ಬಿ. ಚನ್ನಬೈರೇಗೌಡರು.—1½ ಲಕ್ಷ ರೂಪಾಯಿ ಖರ್ಚಾಗಿದೆ. ಇದಕ್ಕೆ ಎಷ್ಟು ನಸಿಗಳು ಚೆನ್ನಾಗಿ ಬರಬಹುದು ಎಂಬುದಾಗಿ ಗೊತ್ತಾಗಿದೆ ?

ಮಾನ್ಯ ಟಿ. ಮರಿಯಪ್ಪನವರು.—ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಗಿಡದ ಮೇಲಿನ ಪ್ರೇಮದಿಂದ ನಸಿಗಳನ್ನು ಮಹಿನೀಯರು ತೆಗೆದುಕೊಂಡಿದ್ದಾರೆ. ನುಮಾರು 5% ಸರಿಯಾಗಿ ಬಂದಿಲ್ಲದೆ ಇರಬಹುದು.

ಶ್ರೀ ಬಿ. ಚನ್ನಬೈರೇಗೌಡರು.—1948-49ರಲ್ಲಿ 41 ಸಾವಿರ ಚಿಲ್ಲರೆ ರೂಪಾಯಿ ಆಗಿದೆ ಎಂದು ತಿಳಿಸಿದ್ದೀರಿ.